


# ಟಾಮಿಯ ಹೊಸ ನೆರೆಯವನು






ಸೋಮುವಿನ ನೆರೆಮನೆ ಬಹಳ ದಿನದಿಂದ ಖಾಲಿ ಇತ್ತು, “ಯಾರಾದರೂ ಒಳ್ಳೆಯವರು ಆ ಮನೆಗೆ ಬಂದರೆ, ನನಗೆ ಆಟವಾಡಲು ಸ್ನೆಹಿತರು ಸಿಗುತ್ತಾರೆಯೆಂದು” ಸೋಮು ಯಾವಾಗಲು ಮನಸಿನಲ್ಲಿ ಅಂದುಕೊಳ್ಳುತ್ತಿದ್ದ. ಒಂದು ದಿನ ಸೋಮುವಿನ ತಂದೆ ಮನೆಗೆ ಬಂದು ಅವನನ್ನು ಕರೆದರು. “ಹೇ ಸೋಮು ನಿನಗಾಗಿ ಒಂದು ಸುದ್ದಿ ಇದೆ. ನೆರೆ ಮನೆಗೆ ಹೊಸ ಕುಟುಂಬದವರು ಬಂದರು. ಆ ಮನೆಯಲ್ಲಿ ನಿನ್ನ ವಯಸ್ಸಿನ ಹುಡುಗಿಯೊಬ್ಬಳಿದ್ದಾಳೆ. ಅವಳ ಹೆಸರು ಲೀಲಾ – ಆದ್ದರಿಂದ ನೀನು ಆಕೆಯೊಡನೆ ಆಡಬಹುದು, ಇನ್ನೊಂದು ವಿಷಯ ಗೊತ್ತಾ? ಅವರ ಬಳಿ ನಾಯಿಯೂ ಇದೆ. ಅಲ್ಲಿಗೆ ಟಾಮಿಗೂ ಕೂಡ ಮತ್ತೊಬ್ಬ ಸ್ನೇಹಿತ ಸಿಕ್ಕಿದ.



ಸೋಮುವಿನ ಪೋಷಕರು ಮತ್ತು ಲೀಲಾಳ ಪೋಷಕರು ಒಳ್ಳೆಯ ಸ್ನೇಹಿತರಾದರು. ಅವರ ತಂದೆಯವರು ಭೇಟಿಯಾಗಿ ಆಗಾಗ ಮಾತನಾಡುತ್ತಿದ್ದರು. ಅವರ ತಾಯಂದಿರು ಒಟ್ಟಿಗೆ ಮಾರುಕಟ್ಟೆಗೆ ಹೋಗಿ ಬರುತ್ತಿದ್ದರು.






ಸೋಮು ಮತ್ತು ಲೀಲಾ ಒಳ್ಳೆಯ ಗೆಳೆಯರಾದರು. ಒಂದೇ ಶಾಲೆಗೆ ಹೊಗುತ್ತಿದ್ದರು, ಒಟ್ಟಿಗೆ ಕಣ್ಣಾ ಮುಚ್ಚಾಲೆ ಆಡುತ್ತಿದ್ದರು, ಕಾರ್ಟೂನ್ ನೋಡಿದರು. ಟಾಮಿಯನ್ನು ಬಿಟ್ಟು ಉಳಿದವರೆಲ್ಲರೂ ಸಂತೋಷದಿಂದಿದ್ದರು.








ಪಕ್ಕದ ಮನೆಯ ನಾಯಿ ಬೋಜೊ ಟಾಮಿಗಿಂತ ಶಕ್ತಿಶಾಲಿ ಮತ್ತು ದೊಡ್ಡದಾಗಿತ್ತು. ಮೊದಲ ಬಾರಿ ನೋಡಿದಾಗ ಬೋಜೊ ಕೂಡ ಸ್ನೆಹಮಯಿ ಅನಿಸುತ್ತಿದ್ದಾ. ಟಾಮಿ ಒಮ್ಮೆ ಸೋಮುವಿನ ಜೊತೆಗೆ ಲೀಲ ಮನೆಗೆ ಹೋಯಿತು. ಟಾಮಿ ಹಾಗು ಬೋಜೊ ಒಬ್ಬರು ಇನೋಬ್ಬರನ್ನು ನೋಡಿ ಬಾಲ ಅಲ್ಲಾಡಿಸಿದರು. ಟಾಮಿ, ಸೋಮು, ಲೀಲಾ ಹಾಗು ಬೋಜೊ ಎಲ್ಲರೂ ಸೆರಿಕೋಂಡು ಚೆಂಡಾಟ ಮತ್ತು ಕಣ್ಣಾ ಮುಚ್ಚಾಲೆ ಆಟ ಆಡಿದರು. ಟಾಮಿ ಬೋಜೊವನ್ನು ಸ್ನೇಹಮಯಿ ಎಂದು ಬಹುವಾಗಿ ಮೆಚ್ಚಿಕೊಂಡಿತು




ಆದರೆ ಕೆಲದಿನಗಳ ನಂತರ ಟಾಮಿಗೆ ಬೋಜೊ ಕಾಣುವಷ್ಟು ಒಳ್ಳೆಯವನಾ? ಅವನು ನಿಜವಾದ ಸ್ನೇಹಿತನಾ ಎಂಬ ಅನುಮಾನ ಮೂಡತೊಡಗಿತು. ಒಮ್ಮೆ ಸೋಮು ಬೇರೆ ಕೆಲಸದಲ್ಲಿ ಇದ್ದಾಗ ಅವನ ಬಿಸ್ಕತ್‌ನ್ನು ಬೋಜೊ ತಿಂದಿದ್ದ, ಆದರೆ ಈ ವಿಷಯ ಗೊತ್ತಿಲದೆ ತನ್ನ ಟಾಮಿನೇ ಬಿಸ್ಕತ್ತು ತಿಂದಿದ್ದೂ ಅಂತ ಸೋಮು ಅಂದುಕೊಂಡು ಟಾಮಿಗೆ ತುಂಬ ಬೈದುಬಿಟ್ಟಾ.






ಚೆಂಡಾಟವನ್ನು ಆಡಲು ಹೋದಾಗ, ಸೋಮು ನೋಡದೆ ಇದ್ದ ಸಮಯದಲ್ಲಿ ಬೋಜೊ ತನ್ನ ಬುಧಿವಂತಿಕೆಯಿಂದ ಟಾಮಿಯನ್ನು ಒರಟಾದ ಜಾಗದ ಮೇಲೆ ತಳ್ಳಿ ನೋವು ಮಾಡಿತು. ಟಾಮಿಗೆ ದುಃಖವಾಯಿತು, ಗೊಂದಲವೂ ಆಯಿತು. ನಿಜವಾಗಿಯೂ ಬೋಜೋ ನನ್ನನ್ನು ಇಷ್ಟಪಡುವನೇ? ನನಗೆ ಯಾಕೆ ನೋವು ಮಾಡಿದ? ಎಂದು ಟಾಮಿ ಚಿಂತಿಸಿದ.








ಒಂದು ದಿನ ಟಾಮಿ ತಿಂಡಿ ತಿನ್ನಲು ತನ್ನ ಬಟ್ಟಲು ಕಡೆ ಹೋದರೆ ಅದು ಖಾಲಿ ಆಗಿತ್ತು ಹಾಗು ಅವನಿಗೆ ಆಶ್ಚರ್ಯವಾಯಿತು. ಅವನು ಗಂಜಿ ಕುಡಿದಿರಲಿಲ್ಲ. ಅದು ಹೇಗೆ ಮಾಯವಾಯಿತು ಎಂದು ಅರ್ಥವಾಗಲಿಲ್ಲಾ. ಸೋಮು ಮತ್ತು ಅವರ ಪೋಷಕರು ಎಂದೂ ಕೂಡ ಬಟ್ಟಲು ಖಾಲಿ ಬಿಡುತ್ತಿರಲಿಲ್ಲಾ. ಆದರೆ ಸಮಯ ಕಳೆದಂತೆ ಇದು ಪ್ರತಿ ನಿತ್ಯವೂ ಆಗತೊಡಗಿತು, ಅವನ ಊಟ ಖಾಲಿ ಆಗಿರುತ್ತಿತ್ತು, ಅದಕ್ಕೆ ತಿನ್ನಲು ಹೊಟ್ಟೆ ತುಂಬಾ ಸಿಗದೆ ಟಾಮಿ ಸೊರಗಿತು. ಆದರೆ ಸೋಮುವಿಗೆ ಏಕೆ ಹೀಗೆ ಎಂದು ಅರ್ಥವಾಗಲಿಲ್ಲ.










ಒಂದು ದಿನ ಬೆಳಗ್ಗೆ ಟಾಮಿ ತಿಂಡಿ ತಿನ್ನಲು ಹೋದಾಗ ಬೋಜೊ ತನ್ನ ಬಟ್ಟಲಿನಲ್ಲಿ ತಿನ್ನುವುದನ್ನು ನೋಡಿದ. “ಹೋ ಹಾಗಾದರೆ ನನ್ನ ಗಂಜಿಯನ್ನು ನಿತ್ಯವೂ ತಿನ್ನುತ್ತಿದ್ದವನು ನೀನು? ಏಕೆ ಹೀಗೆ ಮಾಡಿದೆ? ನಾನು ನಿನ್ನನ್ನು ಸ್ನೇಹಿತ ಎಂದು ತಿಳಿದಿದ್ದೆ ಎಂದು ಟಾಮಿ ಹೇಳಿತು. “ನಾನು ನಿನ್ನ ಸ್ನೇಹಿತನಲ್ಲ.. ನೀನು ತಪ್ಪಾಗಿ ಯೋಚಿಸಿದೀಯ.” ದೊಡ್ಡ ಹಲ್ಲುಗಳನ್ನು ತೋರುತ್ತಾ ಬೋಜೊ ನಕ್ಕನು. “ನೀನು ಸೋಮುವಿಗೆ ಈ ವಿಷಯವನ್ನು ತಿಳಿಸಿದರೆ ನಾನು ನಿನ್ನೊಡನೆ ಜಗಳವಾಡುತ್ತೇನೆ. ನಾನು ನಿನಗಿಂತಲೂ ಬಲಶಾಲಿ. ಎಚ್ಚರ! ಹಾಗೂ ಸೋಮು ನಿನ್ನ ಮಾತನ್ನು ನಂಬುವುದೂ ಇಲ್ಲ. ಅವನಿಗೆ ನಾನೆಂದರೆ ಇಷ್ಟ”! ಎಂದು ಬೋಜೊ ಹೇಳಿದನು.




ಟಾಮಿ ಬೋಜೊ ತನಗೆ ಮತ್ತೆನಾದರು ನೋವು ಮಾಡಬಹುದೆಂಬ ಭಯದಲ್ಲಿ ಸೋಮುವಿನ ಹತ್ತಿರಾ ಬಂದು ಅವನಾ ಹಾಸಿಗೆಯ ಬಳಿ ಕುಳಿತ. ಸೋಮುವಿಗೆ ಟಾಮಿ ಯಾಕೆ ಬರುತ್ತೆಲಾ?, ಶಾಲೆಗೆ ಹೋಗಬೇಕಾದರೆ ತನ್ನ ಹಿಂದೆ ಯಾಕೆ ಬರುತ್ತಿಲ್ಲಾ. ಯಾಕೆ ಟಾಮಿ ದುಃಖದಿಂದ ಭಯಗೊಂಡಂತೆ ಇರುತ್ತಾನೆ? ಎಂದು ಸೋಮುಗೆ ಅರ್ಥವಾಗಲಿಲ್ಲಾ. "ಏನಾಯಿತು ಟಾಮಿ? ಎಲ್ಲೋ ಏನೋ ತಪ್ಪಾಗಿದೆ ಎನಿಸುತ್ತಿದೆ.. ಸೋಮು ನುಡಿದ.









ಮಾರನೆಯ ದಿನ ಟಾಮಿ ಸೋಮುವಿಗೆ ಸತ್ಯ ಗೊತ್ತಾಗಬೇಕೆಂದು ನಿರ್ಧರಿಸಿದ. ಅವನ ಶೂ ಲೇಸ್ ಹಿಡಿದು ಎಳೆದು ತಂದು ಗಂಜಿ ಕುಡಿಯುತ್ತಿದ್ದ ಬೋಜೊವನ್ನು ತೋರಿಸಿದ. "ಕೆಟ್ಟ ನಾಯಿ" ಅದನ್ನು ಕಂಡ ಸೋಮು ಹೇಳಿದ. ಬೋಜೊ ಹೀಗೆ ಮಾಡಿದ್ದರಿಂದಲೇ ಟಾಮಿ ಸೊರಗಿದೆ ಎಂದು ಸೋಮು ತಿಳಿದ.




ಸೋಮು ಈ ಸಂಗತಿಯನ್ನು ಲೀಲಾಳಿಗೆ ಹೇಳಿದ. ಲೀಲಾಳಿಗೂ ಕೋಪ ಬಂತು. ಬೋಜೋನ ಇಷ್ಟವಾದ ಆಹಾರ ನೀಡದೆ, ಹೊರಗೆ ಕರೆದೊಯ್ಯದೆ ಶಿಕ್ಷೆ ನೀಡಿದರು.






“ಮೇಲ್ನೋಟಕ್ಕೆ ಬೋಜೊ ಸ್ನೇಹಮಯಿ ಒಳ್ಳೆಯ ನಾಯಿ” “ಕೆಲವೊಮ್ಮೆ ಮ
ನುಷ್ಯರು ಹೀಗೆ ನಂಬಿದರೆ ನೋವು ನೀಡಿ ಅಸುರಕ್ಷಿತ ಎನಿಸುತ್ತದೆ. ಟಾಮಿ
ಹೇಳಿದ್ದರಿಂದ ಈ ವಿಷಯ ತಿಳಿಯಿತು. ಹಾಗಾದರೆ ಯಾರನ್ನು ನಂಬುವುದು?
ಹೇಗೆ ನಂಬುವುದು?”” ಎಂದು ಸೋಮು ಮನಸಿನಲ್ಲಿ ಅಂದುಕೊಂಡ.



‘ಮನುಷ್ಯರನ್ನು ನಂಬಿದಾಗ ಹೀಗೆ ನೋವುಂಟು ಮಾಡುವ ಸಂಗತಿಗಳು ನಡೆದಾಗ ಅದು ಬೇಸರವನ್ನು ತರುತ್ತದೆ. ಗೊಂದಲವೂ ಆಗಿ ಜಿಗುಪ್ಸೆ ಉಂಟಾಗಿ ಒಳ್ಳೆಯ ವ್ಯಕ್ತಿಗಳಲ್ಲ ಎಂಬುದು ತಿಳಿಯುತ್ತದೆ. ಅವರು ನಂಬಿಕೆಗೂ ಅರ್ಹರಾಗಿರುವುದಿಲ್ಲ” ಸೋಮುವಿನ ಅಮ್ಮಾ ಹೆಳಿದರು. ಕೆಲವೊಮ್ಮೆ ಸ್ನೇಹಮಯಿ ಎಂಬಂತೆ ಕಂಡರೂ ಅವರೆ ನಮಗೆ ನೋವು ತರುತ್ತಾರೆ. ಬೋಜೋವಿನಂತೆ ಟಾಮಿ ಅವರನ್ನು ಒಳ್ಳೆಯವನಂತೆ ತಿಳಿದ, ಮನುಷ್ಯರಲ್ಲೂ ಇಂತವರು ಇರುತ್ತಾರೆ. ಆದರೆ ಎಲ್ಲರೂ ಹೀಗೆ ಇರುವುದಿಲ್ಲಾ, ಕೆಲವರು  ಮಾತ್ರ ಹೀಗೆ ಇರುತ್ತಾರೆ ಅವರನ್ನು ಗುರುತಿಸಿ ದೂರ ಇರುವುದೇ ವಾಸಿ.  “ಈಗ ನಾನು ಮನುಷ್ಯರಲ್ಲೂ ಇಂತಹ ಅಸುರಕ್ಷಿತರು ಇರುತ್ತಾರೆ ಎಂಬುದನ್ನು ಅರಿತೆವು” ಟಾಮಿ ಅಂದುಕೊಂಡಿತು. “ಸೋಮುವಿನ ತಾಯಿ ಹೇಳಿರುವಂತೆ ಎಲ್ಲರೂ ಅಲ್ಲ.. ಈಗ ನನಗೆ ಸುರಕ್ಷತೆಯ ಬಗ್ಗೆ ತಿಳಿದಿದೆ. ನನಗೆ ಚಿಂತೆ ಇಲ್ಲ. ನಾನು ಸೋಮುವಿಗೆ ಹೇಳಿದ್ದು ಒಳ್ಳೆದಾಯಿತು, ಇಲ್ಲದಿದ್ದರೆ ಬೊಜೋ ನನಗೆ ನೋವು ಮಾಡುತ್ತಿದ್ದುದು ಯಾವತ್ತಿಗೂ ಸೋಮುವಿಗೆ ಗೊತ್ತಿರಲಿಲ್ಲಾ. ಹೀಗೆಂದು ಸುರಕ್ಷತಾ ಭಾವದಲ್ಲಿ ಟಾಮಿ ಸೋಮುವಿನ ಕಾಲ ಮೇಲೆ ಮಲಗಿದ.

Community Child & Adolescent Mental Health Service Project,
Department of Child & Adolescent Psychiatry,
National Institute of Mental Health & Neruosciences (NIMHANS)
(Institute Of National Importance)
Hosur Road, Benaaluru - 560029

Website : www.nimhans.ac.in
Email : capnimhans@gmail.com

Supported by the Dept. of Women and Child Development, Govt. of Karnataka

Design and Art work : SathishRam